# ಸ್ವಾಮಿ ವಿವೇಕಾನಂದರ ವೈಜ್ಞಾನಿಕ ದೃಷ್ಟಿ

(ಹಿಂದಿನ ಸಂಚಿಕೆಯಿಂದ ಮುಂದುವರೆದುದು)

ಜಿ.ಟಿ. ನಾರಾಯಣ ರಾವ್

## ಮೂಢನಂಬಿಕೆಗಳ ತಾಯಿ ಫಲಜ್ಯೋತಿಷ

ಈಗ ನಾನು ಉಲ್ಲೇಖಿಸಬೇಕೆಂದಿರುವ ಎರಡನೆಯ ನಿದರ್ಶನ. ಅನಾದಿ ಕಾಲದಿಂದಲೂ ಮಾನವನ ನಿತ್ಯ ಸಂಗಾತಿಯಾಗಿದ್ದು ಇಂದಿಗೂ ಉಳಿದಿರುವುದು ವಿಜ್ಞಾನವೋ ಮೂಢನಂಬಿಕೆಯೋ ಎಂದು ಈಗ ಪ್ರಶ್ನಿಸಿಕೊಂಡರೆ ಉತ್ತರ ಮೂಢನಂಬಿಕೆ! ಏಕೆ? ಸುತ್ತಲಿನ ನೈಸರ್ಗಿಕ ವಿದ್ಯಮಾನಗಳನ್ನು ಬೆರಗಿಗಿಂತ ಹೆಚ್ಚಾಗಿ ಭಯದಿಂದ ಗಮನಿಸಿದ ಆದಿಮಾನವನ ಮನದಲ್ಲಿ ಮೊದಲು ಮೂಡಿದ್ದು ಮೂಢನಂಬಿಕೆ, ತನಗಿಂತ ಅಧಿಕತ್ರಾಣಿಯೊಂದರ ಕ್ರೀಡೆಗಳವು, ಅದರೊಂದಿಗೆ ಹೋರಾಡಿ ತಾನು ಉಳಿಯಲಾರೆ, ಅದನ್ನು ಓಲೈಸಿ ಒಲಿಸಿ ಬಾಳುವುದೊಂದೇ ಶರಣು—ಹೀಗೆ ಹರಿಯಿತು ಆತನ ಚಿಂತನೆ. ಫಲವಾಗಿ ಪೂಜೆ, ಹರಕೆ, ಬಲಿ ಮುಂತಾದ ಯಾಂತ್ರಿಕ ವಿಧಿಗಳು ರೂಢಿಗೆ ಬಂದುವು. ಇವೆಲ್ಲವುಗಳ ತಳದಲ್ಲಿದ್ದುದು ಭಯ. ಇದರ ಮೂಲ ಮೂಢನಂಬಿಕೆ. ಇದು 'ಕಾರ್ಯ'. ಇದರ ಹಿನ್ನೆಲೆ 'ಕಾರಣ'ವೇನು?

ಇದರ ಶೋಧದಲ್ಲಿ ತೊಡಗಿದ ಮಾನವಮತಿಗೆ ಕ್ರಮೇಣ 'ಕಾರ್ಯ'ದ (ಅಂದರೆ ತಾನು ಭಾವಿಸಿದ್ದ ಮೂಢನಂಬಿಕೆ) ಹಿನ್ನೆಲೆಯಲ್ಲಿದ್ದ 'ಕಾರಣ' ಗೋಚರವಾಯಿತು. ಆಗ ಮೂಢನಂಬಿಕೆ ಮಾಯವಾಯಿತು. ಈ ಅರಿವು ಮಿನುಗಿದಾಗ ಮೈದಳೆದದ್ದೇ ವಿಜ್ಞಾನ ಎಂದೇ, ವಿಜ್ಞಾನದ ಮೂಲ ಮೂಢನಂಬಿಕೆ ಎನ್ನುವುದುಂಟು. ವ್ಯಾಪಕವಾಗಿ ಹೇಳುವುದಾದರೆ ಎಲ್ಲ ಮೂಢನಂಬಿಕೆಗಳ ಮೂಲವನ್ನು 'ಫಲಜ್ಯೋತಿಷ'ದಲ್ಲಿ (astrology)ಕಾಣುತ್ತೇವೆ. ಇದನ್ನು ಕುರಿತು ಸ್ವಾಮೀಜಿಯವರ ಚಿಂತನೆ ಬಗೆ ಏನೆಂಬುದನ್ನು Man the Maker of his Destiny—"ಸ್ವಂತ ಅದೃಷ್ಟದ ನಿರ್ಮಾಪಕ ಮಾನವ"—ಎಂಬ ಉಪನ್ಯಾಸದಲ್ಲಿ ನೋಡಬಹುದು. ಅದರ ಸಂಗ್ರಹಾನುವಾದ, (ಇದರಲ್ಲಿಯ 'ನಾನು' ಸ್ವಾಮಿಜಿಯವರಿಗೆ ಅನ್ವಯಿಸುತ್ತದೆ):

'ದಕ್ಷಿಣ ಭಾರತದಲ್ಲಿ ಅತಿ ಪ್ರಬಲವಾದ ಒಂದು ವಂಶವಿತ್ತು. ಬೇರೆ ಬೇರೆ ಕಾಲಗಳಲ್ಲಿ ಬಾಳಿದ ಗಣ್ಯ ವ್ಯಕ್ತಿಗಳ ಜನನ ಮುಹೂರ್ತಗಳನ್ನು ಆಧರಿಸಿ ಅವರ ಜಾತಕಗಳನ್ನು ರಚಿಸುವುದು ಈ ವಂಶಜರ ವೃತ್ತಿ. ಇವನ್ನು 'ಓದಿ' ಅವರು ಆಯಾ ಜಾತಕನ, ಅಂದರೆ ವ್ಯಕ್ತಿಯ, ಬಗೆಗಿನ ಪ್ರಮುಖ ಸಂಗತಿಗಳನ್ನು ಮುನ್ನುಡಿದರು, ಮತ್ತು ಈ ಕುರಿತ ವಿವರಗಳನ್ನು ದಾಖಲಿಸಿದರು. ಕಾಲಾಂತರದಲ್ಲಿ, ಘಟನೆಯ ಮೇಲೆ ಘಟನೆಗಳು ಪೇರಿಕೆಗೊಂಡಂತೆ, ಇವನ್ನು ದಾಖಲೆಗಳಲ್ಲಿಯ ವಿವರಗಳೊಂದಿಗೆ ಹೋಲಿಸಿ ನೋಡಿದರು. ಸಾವಿರ ವರ್ಷ ಪರ್ಯಂತ ಈ ತುಲನೆ ಮುಂದುವರಿದಾಗ ಅಲ್ಲಿ ಹಲವಾರು ಹೊಂದಾಣಿಕೆಗಳು ಕಂಡುಬಂದುವು. ಅವನ್ನು ಕ್ರೋಡೀಕರಿಸಿ ಅವುಗಳ ತಳದಲ್ಲಿರಬಹುದಾದ ಸೂತ್ರಗಳನ್ನು ಊಹಿಸಿ ಎಲ್ಲವನ್ನೂ ಬೃಹತ್ಸಂಪುಟವೊಂದರಲ್ಲಿ ಕಲೆಹಾಕಿಟ್ಟರು. ಕಾಲಾಂತರದಲ್ಲಿ ಈ ವಂಶ ನಶಿಸಿಹೋಯಿತು. ಆದರೆ ಫಲಜ್ಯೋತಿಷಿಗಳ ದಂಡು ಮಾತ್ರ ಉಳಿಯಿತು. ಆ ಬೃಹತ್ಸಂಪುಟ ಈ ದಂಡಿನ ಸೊತ್ತು. ಫಲಜ್ಯೋತಿಷ ಈ ತೆರನಾಗಿ ಅಸ್ತಿತ್ವಕ್ಕೆ ಬಂದಿರುವುದು ಸಾಧ್ಯ. ಹಿಂದೂಗಳನ್ನು ತೀವ್ರವಾಗಿ ಗಾಸಿಗೊಳಿಸಿರುವ ಕುರುಡು ನಂಬಿಕೆಗಳ ಪೈಕಿ ಅವರು ಫಲಜ್ಯೋತಿಷದ ಸೂಕ್ಷ್ಮಾತಿಸೂಕ್ಷ್ಮ ವಿವರಗಳಿಗೆ ಅತ್ಯಧಿಕ ಲಕ್ಷ್ಯ ಹರಿಸಿದುದೂ ಒಂದಾಗಿದೆ. ನಮ್ಮ ಚಿಂತನೆ ಪ್ರಕಾರ ಭಾರತಕ್ಕೆ ಫಲಜ್ಯೋತಿಷ ತಂದವರು ಗ್ರೀಕರು. ಇವರು ಹಿಂದೂಗಳಿಂದ ಖಗೋಳ ವಿಜ್ಞಾನ ಪಡೆದು ಇದನ್ನು ತಮ್ಮ ಜೊತೆ ಒಯ್ದು ಯುರೋಪಿಗೆ ತಲುಪಿಸಿದರು. ಈ ಪರಸ್ಪರ ಪ್ರಭಾವವನ್ನು ಭಾರತದ ಪ್ರಾಚೀನ ಪವಿತ್ರ ಮಂದಿರಗಳಲ್ಲಿ ಸ್ಪಷ್ಟವಾಗಿ ಕಾಣಬಹುದು. ಇವು ನಿರ್ದಿಷ್ಟ ಜ್ಯಾಮಿತೀಯ ಆಲೇಖ್ಯಾನುಸಾರ ರಚಿತವಾಗಿವೆ, ಮತ್ತು ನಕ್ಷತ್ರಗಳು ನಿರ್ದಿಷ್ಟ ಸ್ಥಾನಗಳಿಗೆ ಬಂದಾಗ ಜನ ನಿರ್ದಿಷ್ಟ ಕರ್ಮಗಳನ್ನು ಆಚರಿಸಬೇಕೆಂದು ವಿಧಿಸುತ್ತವೆ. ಅರ್ಥಾತ್, ಇಲ್ಲಿಯ ಕರ್ಮಗಳಿಗೆ ಅಲ್ಲಿಯ ತಾರೆಗಳು ಹೊಣೆ ಎಂಬ ಅತಾರ್ಕಿಕ ಧೋರಣೆಯನ್ನು ಪ್ರತಿಪಾದಿಸಿವೆ.

"ಭವಿಷ್ಯವನ್ನು ಅದ್ಭುತವಾಗಿ ಕಣಿನುಡಿದಿರುವ ಹಲವಾರು ಫಲಜ್ಯೋತಿಷಿಗಳನ್ನು ನೋಡಿದ್ದೇನೆ. ಆದರೆ ಅವರು ನಕ್ಷತ್ರಗಳನ್ನು ಆಧರಿಸಿ ಅಥವಾ ತತ್ಸದೃಶ ಕ್ರಿಯೆ ಎಸಗಿ ಈ ಯಶಸ್ಸು ಗಳಿಸಿರಬಹುದೆಂಬ ಪೊಳ್ಳನ್ನು ನಾನಂತೂ ಜೀರ್ಣಿಸಿಕೊಳ್ಳಲಾರೆ. ಹಲವಾರು ಸಂದರ್ಭಗಳಲ್ಲಿ ತೀರ ಸ್ಪಷ್ಟವಾಗಿ ಅದು ಮನೋವಾಚನವಾಗಿತ್ತು. ಮುಂದೆ ಘಟಿಸಲಿರುವುದನ್ನು ಕೆಲವೊಮ್ಮೆ ಪರಮಾಶ್ಚರ್ಯಕರವಾಗಿ ಕಣಿನುಡಿದಿರುವುದೂ ಉಂಟು. ಆದರೆ ಹೆಚ್ಚಿನ ಸಂದರ್ಭಗಳಲ್ಲಿ ಅದು ಬರಿದೆ ಒಣಗುಲ್ಲು. ಲಂಡನ್ನಿನಲ್ಲಿ ಒಬ್ಬ ತರುಣ ನನ್ನಲ್ಲಿಗೆ ಬಂದು ಮುಂದಿನ ವರ್ಷ ತನ್ನ ಗತಿ ಏನಾದೀತೆಂದು ಕೇಳುತ್ತಿದ್ದ. 'ಹಾಗೆಂದರೇನರ್ಥ?' ಎಂದು ಅವನನ್ನು ಪ್ರಶ್ನಿಸಿದಾಗ

ಅವನೆಂದ, 'ನಾನು ಪೂರ್ತಿ ಹಣ ಕಳೆದುಕೊಂಡು ದಟ್ಟ ದರಿದ್ರನಾಗಿದ್ದೇನೆ.' ಅನೇಕ ಮಂದಿಗೆ ದೇವರೆಂದರೆ ಹಣ ವೊಂದೇ. ದುರ್ಬಲ ವ್ಯಕ್ತಿಗಳು ತಮ್ಮ ಸರ್ವಸ್ವವನ್ನೂ ಕಳೆದು ಕೊಂಡು ತಾವು ನಿರ್ಗತಿಕರಾಗಿರುವೆವೆಂದು ತಿಳಿದಾಗ ಸಂಶಯಾಸ್ಪದ ವಿಧಾನಗಳಿಂದಾದರೂ ಹಣ ಗಳಿಸಲು ಹಿಂಜರಿ ಯುವುದಿಲ್ಲ. ಇಂಥವರು ಫಲಜ್ಯೋತಿಷ ಹಾಗೂ ಇದೇ ತೆರನಾದ ನಯವಂಚಕ ವಿಧಾನಗಳಿಗೆ ಶರಣಾಗುತ್ತಾರೆ. ಸಂಸ್ಕೃತ ದಲ್ಲಿ ಒಂದು ಗಾದೆ ಇದೆ: ಹೇಡಿ ಮತ್ತು ಮುಠ್ಠಾಳ ಮಾತ್ರ 'ಇದು ನನ್ನ ವಿಧಿ' ಎಂದು ಕೊರಗುತ್ತಾರೆ; ದೃಢಮನಸ್ಕ ರಾದರೋ 'ನನ್ನ ವಿಧಿಯನ್ನು ನಾನೇ ಬರೆಯುತ್ತೇನೆ' ಎಂದು ಪಣ ತೊಡುತ್ತಾರೆ. ಮುದುಕತನಕ್ಕೆ ಕಾಲಿಡುತ್ತಿರುವ ಬಲಹೀನರು ಮಾತ್ರ ಅದೃಷ್ಟದ ಬಗ್ಗೆ ಮಾತಾಡುತ್ತಾರೆ. ಸಾಧಾರಣವಾಗಿ ಯುವಜನರೆಂದೂ ಫಲಜ್ಯೋತಿಷದ ಹತ್ತಿರ ಕೂಡ ಸುಳಿಯುವುದಿಲ್ಲ. ನಾವು ಯಾವುದೋ ಗ್ರಹದ ಪ್ರಭಾವಕ್ಕೆ ಒಳಗಾಗಿರುವುದು ನಿಜವೇ 'ಇರಬಹುದು'. ಆದರೆ ಈ ಸಂಗತಿ ನಮ್ಮನ್ನೇನೂ ಬಾಧಿಸಬೇಕಾಗಿಲ್ಲ.

"ಬುದ್ಧ ವಿಧಿಸಿದ್ದಾನೆ, 'ವಂಚಕ ವಿಧಾನಗಳಿಂದ ಮತ್ತು ಮಿಥ್ಯಾಚಮತ್ಕಾರಗಳಿಂದ ನಕ್ಷತ್ರಗಳನ್ನು ಕುರಿತ ಗಣನೆಗಳನ್ನು ಮಾಡಿ ಉದರಂಭರಣೆ ಗೈಯ್ಯುವವರನ್ನು ಹತ್ತಿರ ಸೇರಿಸತಕ್ಕದ್ದಲ್ಲ.' ಬುದ್ಧನಿಗೆ ತಾನೇನು ಹೇಳುತ್ತಿದ್ದೇನೆಂಬುದು ತಿಳಿದಿರಲೇಬೇಕು. ಏಕೆಂದರೆ ಹಿಂದೂಗಳಲ್ಲೆಲ್ಲ ಆತ ಪರಮ ಶ್ರೇಷ್ಠ ನಕ್ಷತ್ರಗಳು ಬರಲಿ, ನಮಗೇಕೆ ಆ ಚಿಂತೆ? ನಕ್ಷತ್ರವೊಂದು ನನ್ನ ಬದುಕನ್ನು ಕಲಕುವುದಾದರೆ ನಾನದಕ್ಕೆ ದುಗ್ಗಾಣಿ ಕಿಮ್ಮತ್ತೂ ಕೊಡಲಾರೆ. ಫಲಜ್ಯೋತಿಷ ಮತ್ತು ಇಂಥ ಎಲ್ಲ ನಿಗೂಢ ಅಮೂರ್ತ ವಿಷಯಗಳು ಸಾಧಾರಣವಾಗಿ ದುರ್ಬಲ ಮನಸ್ಸಿನ ವ್ಯಾಧಿ ಚಿಹ್ನೆಗಳೆಂಬುದು ನಿಮ್ಮ ಗಮನಕ್ಕೆ ಬರದಿರದು. ಆದ್ದರಿಂದ ನಮ್ಮ ಮನಸ್ಸುಗಳಲ್ಲಿ ಇವು ಉತ್ಕರ್ಷಿ ಸುತ್ತಿವೆಯೆಂಬ ಅರಿವು ಮೂಡಿದಾಗ ನಾವು ವೈದ್ಯರನ್ನು ನೋಡಬೇಕು, ಯೋಗ್ಯ ಆಹಾರ ಸೇವಿಸಬೇಕು ಮತ್ತು ಸಾಕಷ್ಟು ವಿಶ್ರಾಂತಿ ಪಡೆಯಬೇಕು. ಯಾವುದೇ ವಿದ್ಯಮಾನ ಕುರಿತು ವಿವರಣೆ ಅದರ ಸ್ವಭಾವದ ಒಳಗಡೆಯೇ ಒದಗುವುದಾದರೆ ಬಾಹ್ಯ ಮೂಲಗಳಲ್ಲಿ ಅದನ್ನು ಅರಸುವುದು ಅವಿವೇಕ. ಜಗತ್ತು ತನ್ನನ್ನು ತಾನೇ ವಿವರಿಸುವುದಾದರೆ ಈ ವಿವರಣೆಯನ್ನು ಹೊರಗೆಲ್ಲೋ ಹುಡುಕುವುದು ಪರಮ ಮೂರ್ಖತೆ. ವ್ಯಕ್ತಿಯ ಜೀವನದಲ್ಲಿ ಸಂಭವಿಸುವ ಯಾವುದೇ ಘಟನೆಯನ್ನು ಮಾನವಸಾಮರ್ಥ್ಯದ ನೆರವಿನಿಂದ ವಿವರಿಸಲಾಗದಂಥ ದೃಷ್ಟಾಂತ ಎಲ್ಲಿಯಾದರೂ ಇದೆಯೇ? ಅಂದಮೇಲೆ ಇಲ್ಲಿಯ ವಿದ್ಯಮಾನ ಕುರಿತಂತೆ ನಕ್ಷತ್ರಗಳಲ್ಲಿಗೋ ಇನ್ನೆಲ್ಲಿಗೋ ಬುದ್ಧಿ ಹರಿಸುವುದರ ಔಚಿತ್ಯವಾದರೂ ಏನು?

"ಇದೊಂದು ಹಳೆಯ ಕತೆ. ನಾಡಿನ ದೊರೆಯಲ್ಲಿಗೆ ಒಬ್ಬ ಫಲಜ್ಯೋತಿಷಿ ಹೋಗಿ, 'ಇನ್ನು ಆರು ತಿಂಗಳ ಒಳಗೆ ನೀನು ಮಡಿಯಲಿರುವೆ' ಎಂದ. ಸಹಜವಾಗಿಯೇ ಅರಸ ಭಯ ವಿಹ್ವಲನಾದ—ಆ ಗಳಿಗೆಯೇ ಸತ್ತುಹೋಗವನೋ ಎಂಬಂಥ ಸ್ಥಿತಿ. ಈತನ ಬುದ್ಧಿವಂತ ಮಂತ್ರಿ 'ಫಲಜ್ಯೋತಿಷಿಗಳೆಲ್ಲರೂ ಮುಠ್ಠಾಳರು' ಎಂದು ಘೋಷಿಸಿದರೂ ರಾಜನಲ್ಲಿ ನೆಮ್ಮದಿ ಮೂಡಲಿಲ್ಲ. ಇನ್ನೇನು ಹಾದಿಯೆಂದು ಯೋಚಿಸಿದ ಮಂತ್ರಿ, ಆ ಫಲಜ್ಯೋತಿಷಿಯನ್ನು ಅರಮನೆಗೆ ಮರುಕರೆಸಿ ಪ್ರಶ್ನಿಸಿದ, 'ನಿನ್ನ ಗಣನೆಗಳೆಲ್ಲವೂ ನಿಷ್ಕೃಷ್ಟವಾಗಿವೆಯೇ?' ಫಲಜ್ಯೋತಿಷಿ ಹೇಳಿದ, 'ಹೌದು. ಇಲ್ಲಿ ಯಾವ ದೋಷವೂ ನುಸುಳಿರಲು ಸಾಧ್ಯವಿಲ್ಲ.' ಆದರೂ ಮಂತ್ರಿಯ ಸಮಾಧಾನಾರ್ಥ ಆ ಗಣನೆ ಗಳನ್ನು ಮಗುದೊಮ್ಮೆ ಮಾಡಿ, 'ಗಣನೆಗಳು ಸರಿಯಾಗಿವೆ. ಭವಿಷ್ಯವಾಚನ ಕರಾರುವಾಕ್ಕಾಗಿದೆ' ಎಂದು ದೃಢೀಕರಿಸಿದ. ಅರಸನ ಮುಖ ಬಿಳಿಚಿಕೊಂಡಿತು. ಫಲಜ್ಯೋತಿಷಿಗೆ ಮಂತ್ರಿ ಸವಾಲೆಸೆದ, 'ನಿನ್ನ ಮರಣ ಎಂದು ಸಂಭವಿಸಲಿದೆ ಎಂಬು ದನ್ನು ಗುಣಿಸಿರುವೆಯಾ?' 'ಹೌದು, ಇನ್ನು ಹನ್ನೆರಡು ವರ್ಷ ಗಳಲ್ಲಿ.' ಆ ಕ್ಷಣ ಮಂತ್ರಿ ತನ್ನ ಕರವಾಲವನ್ನು ಅದರ ಒರೆ ಯಿಂದ ಹಿರಿದು ಜ್ಯೋತಿಷಿಯ ತಲೆ ತರಿದು ದೊರೆಗೆ ಉಸುರಿದ, 'ಈ ಸುಳ್ಳನನ್ನು ನೋಡಿದೆಯಾ? ಈ ಗಳಿಗೆಯೇ ಈತ ಮಡಿದಿದ್ದಾನೆ.'"

ನಮ್ಮ ರಾಷ್ಟ್ರ ನಳನಳಿಸಬೇಕಾದರೆ ಈ ಎಲ್ಲ ಮೌಢ್ಯಗಳಿಂದ ನಾವು ದೂರವಾಗಿರಬೇಕು. ನಮ್ಮನ್ನು ಬಲಿಷ್ಠರಾಗಿ ಮಾಡುವಂಥವು ಮಾತ್ರ ಒಳ್ಳೆಯ ವಿಷಯಗಳು. ಇವು ನಮ್ಮ ಬಲವನ್ನು ಸಂವರ್ಧಿಸುವುವೇ ಎಂಬುದು ಮಾತ್ರ ಇವನ್ನು ಕುರಿತ ಏಕೈಕ ಪರೀಕ್ಷೆ. ವಾಸ್ತವವಾಗಿ, ಒಳಿತೇ ಬದುಕು, ಕೆಡುಕೇ ಸಾವು.

## ಅಧಿದೈವ, ಅಧ್ಯಾತ್ಮ ಮತ್ತು ಅಧಿಭೌತ

ಇವು ಭಾರತೀಯ ಚಿಂತನೆಯ ಮೂರು ಪರಸ್ಪರ ಸಂಬಂಧಿತ ಪರಿಕಲ್ಪನೆಗಳು. ವ್ಯಕ್ತಿ–ಆಕಾಶ (ಅಜ್ಞಾತ) ಅಂತರಕ್ರಿಯೆಯ ಫಲವಾಗಿ ಆತನ ಮನದೊಳಗೆ ಮಿನುಗುವ ಹೊಳಹು ಅಧಿದೈವ ಚಿಂತನೆಯನ್ನೂ, ಇದರ ಒಂದಂಶ ತನ್ನೊಳಗೂ ಇದೆ ಎಂದನ್ನಿಸುವ ಭಾವ ಅಧ್ಯಾತ್ಮ ಚಿಂತನೆ ಯನ್ನೂ, ಇವೆರಡು ಅಮೂರ್ತ ಮತ್ತು ಅವ್ಯಕ್ತ ಚಿಂತನೆ ಗಳಿಗಿಂತ ಹೊರಗಿರುವ ಮೂರ್ತ ಮತ್ತು ವ್ಯಕ್ತವಿಶ್ವ ಅಧಿಭೌತ ಚಿಂತನೆಯನ್ನೂ ಆತನಲ್ಲಿ ಉದ್ದೀಪಿಸುತ್ತವೆ.

ಈ ಪ್ರಯೋಗವನ್ನು ಯಾರು ಬೇಕಾದರೂ ಮಾಡಿ ಪರೀಕ್ಷಿಸಬಹುದು: ಚಂದ್ರರಹಿತ ನಿರ್ಮೇಘ ರಾತ್ರಿಯಲ್ಲೊಬ್ಬ ವ್ಯಕ್ತಿ ಬೆಟ್ಟದ ಕೊಡಿಯುಲ್ಲಿ ಒಂಟಿಯಾಗಿ ನಿಂತು

ನಕ್ಷತ್ರಲೋಕದಲ್ಲಿ ತನ್ಮಯನಾಗಿರುವಾಗ ಆತನೊಳಗೆ ಮೂಡುವ ಭಾವ-ಭಾವನೆಗಳೇನು? ಅದೇ ನಾನು, ನಾನೇ ಅದು: ಇವೆರಡರಿಂದಲೂ ಹೊರಗಿನದು ನಾನು ಮತ್ತು ನಾನು ನಿಂತಿರುವ ನೆಲ. ಅಧಿಭೌತ ಚಿಂತನೆಯನ್ನು ಐನ್‌ಸ್ಟೈನ್ cosmic religious feeling ಎಂದು ಅರ್ಥಪೂರ್ಣವಾಗಿ ಕರೆದಿದ್ದಾರೆ. ಇದು ಬ್ರಹ್ಮಾಂಡೀಯ ಧಾರ್ಮಿಕ ಸಂವೇದನೆ, ಧರ್ಮದ ಮೂಲ ಮತ್ತು ಚಿಂತನೆಗಳ ಪ್ರೇರಕ. ಡಿ.ವಿ.ಜಿ. ಯವರ ನುಡಿಗಳಲ್ಲಿ,

ಬಾನಾಚೆಯಿಂ ವಿಶ್ವಸತ್ತ್ವ ತಾನಿಳಿದಿಳೆಗೆ
ನಾನೆನುವ ಚೇತನದಿ ರೂಪಗೊಂಡಿಹುದೊ?
ನಾನೆನುವ ಕೇಂದ್ರದಿನೆ ಹೊರಟ ಸತ್ತ್ವದ ಪರಿಧಿ
ಬಾನಾಚೆ ತಬ್ಬಿಹುದೊ? ಮಂಕುತಿಮ್ಮ ॥

## ಸಮಾರೋಪ

ಅಧಿದೈವ, ಅಧ್ಯಾತ್ಮ ಮತ್ತು ಅಧಿಭೌತ ಪರಿಕಲ್ಪನೆಗಳು ವ್ಯಕ್ತಿ ತನ್ನನ್ನು ಆವರಿಸಿರುವ ಹಾಗೂ ತನ್ನೊಳಗಿರುವ ಎಲ್ಲವನ್ನೂ ತಾರ್ಕಿಕವಾಗಿ ಅರಿಯಲು ಮಾಡಿರುವ ಪ್ರಯತ್ನ ಮತ್ತು ಚಿಂತನೆಗಳ ಫಲ. ಸಹಜವಾಗಿ ಇವು ಪರಸ್ಪರ ಸಂಬಂಧಿತವಾಗಿವೆ, ಪೂರಕ ಪೋಷಕವೂ ಆಗಿವೆ. ಆಯಾ ವ್ಯಕ್ತಿ, ಆತನ ಆಸಕ್ತಿ, ಪ್ರೇರಣೆಗಳ ಅನ್ವಯ ವ್ಯಕ್ತಾವ್ಯಕ್ತ ವಿಶ್ವದ ಅನ್ವೇಷಣೆಗೆ ಮುಂದಾಗುತ್ತಾನೆ. ಇಂಥ ಅನ್ವೇಷಣೆಯ ವೇಳೆ ತನ್ನ ಪಥವನ್ನು ತಾನೇ ರೂಪಿಸಿಕೊಂಡು ಮುನ್ನಡೆಯುತ್ತಾನೆ. ಇಲ್ಲಿಯ ಅಂತರ್ಗತ ತತ್ತ್ವ: ಗಮ್ಯ ಒಂದೇ, ಯಥಾ ಮತಿ ತಥಾ ಪಥ, ನಿರಂತರ ಗಮನಶೀಲನಾಗಿರುವುದು ವ್ಯಕ್ತಿಯ ಕರ್ತವ್ಯ. ಹೀಗೆ ಒಬ್ಬಾತ ವಿಜ್ಞಾನ ಪಥಗಾಮಿಯಾಗಿದ್ದಾನೆಂದೂ ಇನ್ನೊಬ್ಬ ಧರ್ಮಪಥಗಾಮಿಯಾಗಿದ್ದಾನೆಂದೂ ಭಾವಿಸೋಣ. ಅವರು ನಿಜಕ್ಕೂ ಋಜುಮಾರ್ಗಗಳನ್ನು ಕಡೆಯುತ್ತ ಎತ್ತರೆತ್ತರವೇರುತ್ತಿದ್ದರೆ ಪ್ರತಿಯೊಂದು ಹಂತದಲ್ಲಿಯೂ ಉಭಯರಿಗೆ ಗೋಚರಿಸುವ ವಿಶ್ವಸತ್ಯಗಳಲ್ಲಿ ಸಾಮಾನ್ಯಾಂಶಗಳು ಇದ್ದೇ ಇರುತ್ತವೆ. ಈ ಕಾರಣದಿಂದಲೇ ಉಭಯ ಪ್ರಕಾರಗಳ—ಧರ್ಮ ಮತ್ತು ವಿಜ್ಞಾನ—ನೈಷ್ಠಿಕ ವಿದ್ಯಾರ್ಥಿಯಾಗಿರುವ ಒಬ್ಬ ಜಿಜ್ಞಾಸುವಿಗೆ ಸ್ವಾಮಿ ವಿವೇಕಾನಂದರು ಎಷ್ಟು ಪ್ರಸ್ತುತ ಮತ್ತು ಆತ್ಮೀಯರಾಗುತ್ತಾರೋ ಐನ್‌ಸ್ಟೈನ್ ಕೂಡ ಅಷ್ಟೇ ಆಗುತ್ತಾರೆ. ಎಂದೇ ಈ ಮುಂದಿನ ಎರಡು ಕಗ್ಗಗಳು:

ಚಿಂತನೆಯ ಕಡಲಿನೊಳಗುಲ್ಲಾಸ ನಾವೆಯಲಿ
ಸಂತತ ಮಹಾಯಾನ ಗೈದಿರುವ ಧೀಶಕ್ತಿ
ಅಂತವಿಲ್ಲದ ಸಂತಸವ ಧಾರೆಯೆರೆವ ಪ್ರ-
ಶಾಂತ ಮತಿ ನಿನಗಿದೋ ಚಿರನಮನ ಅತ್ರಿಸೂನು ॥

ವಿಜ್ಞಾನ ಮೂಲವನು ಕಾಣ್ ತತ್ತ್ವಶಾಸ್ತ್ರದಲಿ
ತತ್ತ್ವಶಾಸ್ತ್ರದ ಸೆಲೆಯನರಸು ವಿಜ್ಞಾನದಲಿ
ಸೃಷ್ಟಿವೈಚಿತ್ರ್ಯವೀ ದ್ವಂದ್ವ, ಪರಿಕಿಪೊಡೆ ಅಂ-
ತರ್ಶೋಧೆಗಿದು ಗೋಚರಿಪುದು ತಿಳಿ ಅತ್ರಿಸೂನು ॥

## "ಗೋಪಾಲನೆಲ್ಲಿ"

ಗೋಪಾಲ್ ಮಾ,
ಗೋಪಾಲನ ತಾಯಿ.

ತಾಯಿಯೊಡನಾಡಿಕೊಂಡಿದ್ದ ಬಾಲ,
ಇದ್ದಕ್ಕಿದ್ದ ಹಾಗೆ
ಈ ಇಳೆಗೆ
ಬೆಳಕಿಂದಿಳಿದು ಬಂದಿದ್ದ
ಕರಿಯ ಕುವರ.

ತೊಡೆಯನೇರುತಿದ್ದ,
ಬೇಡುತಿದ್ದ
"ಅದನು ಕೊಡು
ಇದನು ಕೊಡು."
ಜಪಮಾಲೆಯನೆ
ಕಸಿದುಬಿಟ್ಟಿದ್ದ ಭೂಪ,
ಅವಳಂತರಂಗದಟವಿಯ ಗೋಪ
ಹೇಗಿದ್ದವನಿದ್ದಕಿದ್ದ ಹಾಗೆ
ಮಾಯ?

ಕಳವಳಗೊಂಡಳು ಮಾ
ಹುಡುಕಿದಳು,
ಎಲ್ಲೆಲ್ಲೂ
ಸಿಗಲಿಲ್ಲವೆ ಅವನು;
ಮಾಯೆದ ಆಟದವನು.
ಓಡಿ ಬಂದಳು
ತಾಯಿ,
ಪರಮಹಂಸರ ಬಳಿಗೆ.

ಗೋಪಾಲನೆಲ್ಲಿ?
ಆ ಬಾಲನೆಲ್ಲಿ?
ಎಲ್ಲಿ?
ಅವಳ ಪ್ರಶ್ನೆಗೆ
ಅವರು ನಕ್ಕರು.

[ಗೋಪಾಲ್ ಮಾ ಪರಮಹಂಸರ ಬಳಿಗೆ ಬಂದ ಒಂದು ಅಪರೂಪದ ಸಂದರ್ಭ.]

ಅವನಲ್ಲಿಯೆ ಇದ್ದಾನೆ
ಒಳಗೆ,
ಕಟ್ಟಿಹಾಕಿಟ್ಟು
ಹುಡುಕುವುದು ಯಾತಕ್ಕೆ?
ಇನ್ನ್ಯಾತಕ್ಕೆ?

ಅವನೆಲ್ಲಿಯೂ ಹೋಗಲಾರ
ಇನ್ನೆಲ್ಲಿಯೂ ಅಗಲಲಾರ,
ಒಳಗಲ್ಲಿ
ಏಕಾಕಾರ!
ಮತ್ಯಾಕೆ ಮಮಕಾರ?

ಸುಮ್ಮನಾದಳು ಗೋಪಲನಮ್ಮ
ಒಮ್ಮನವಾದಳು ಗೋಪಾಲಮ್ಮ
ಕೇಳಿಸಿತವಳಿಗೀಗೆಲ್ಲೆಡೆಯಲ್ಲೂ
"ಮಾ, ಅಮ್ಮಾ"
"ಗೋಪಾಲ ಮಾ."

— ಆನಂದ ಪಾಟೀಲ